**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.293/2017**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಮಡಿವಾಳ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿತರ ಹೆಸರುಃ
1. ಕೃಪಾಕರನ್ ಟಿ.ಎಸ್.
2. ರಾಜೇಶ್ ಗಾಂಧಿ

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯ 1 ನೇ ಸಾಕ್ಷಿ ಹರಿಹರ ಸುಬ್ರಮಣ್ಯನ್ ಅವರು Serco BPO Pvt Ltd Services ನಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದು, 1 ನೇ ಆರೋಪಿಯಾದ ನೀವು ಐಟಿ ವಿಭಾಗದ ಅಸಿಸ್ಟೆಂಟ್ ಮ್ಯಾನೇಜರ್ ಅಗಿ, 2 ನೇ ಆರೋಪಿಯಾದ ನೀವು ಸೀನಿಯರ್ ಎಕ್ಸಿಕ್ಯೂಟಿವ್ ಅಡ್ಮಿನ್ ಆಗಿ ಕೆಲಸ ಮಾಡುತ್ತಿದ್ದು, ಆರೋಪಿತರಾದ ನೀವು ನಿಮ್ಮ ಉದ್ದೇಶವನ್ನಿಡೇರಿಸಿಕೊಳ್ಳಲು ಸದರಿ ಕಂಪನಿಗೆ ಸೇರಿದ ರೂ.5 ಲಕ್ಷ ಬೆಲೆ ಬಾಳುವ Computers & CPU & Electronics Accessories ಗಳನ್ನು ಕಂಪನಿಯ ಅನುಮತಿಯಿಲ್ಲದೆ ಕಂಪನಿಯಿಂದ ಹೊರಗಡೆ ಸಾಗಿಸಿ ಬೇರೆಯವರಿಗೆ ಮಾರಾಟ ಮಾಡಿ ಬಂದ ಹಣವನ್ನು ಒಳಸಂಚು ರೂಪಿಸಿ ಕಂಪನಿಗೆ ಸಂದಾಯ ಮಾಡದೇ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.120 ಬಿ ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಎರಡನೇಯದಾಗಿ, ಆರೋಪಿತರಾದ ನೀವು ಮೇಲೆ ಹೇಳಿದಂತೆ ನಿಮ್ಮ ಉದ್ದೇಶವನ್ನಿಡೇರಿಸಿಕೊಳ್ಳಲು ಸದರಿ ಕಂಪನಿಗೆ ಸೇರಿದ ರೂ.5 ಲಕ್ಷ ಬೆಲೆ ಬಾಳುವ Computers

& CPU & Electronics Accessories ಗಳನ್ನು ಕಂಪನಿಯ ಅನುಮತಿಯಿಲ್ಲದೆ ಕಂಪನಿಯಿಂದ ಹೊರಗಡೆ ಸಾಗಿಸಿ ಬೇರೆಯವರಿಗೆ ಮಾರಾಟ ಮಾಡಿ ಬಂದ ಹಣವನ್ನು ಕಂಪನಿಗೆ ಸಂದಾಯ ಮಾಡದೇ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ನಂಬಿಕೆದ್ರೋಹವೆಸಗಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.408 ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೂರನೇಯದಾಗಿ, ಆರೋಪಿತರಾದ ನೀವು ಮೇಲೆ ಹೇಳಿದಂತೆ ನಿಮ್ಮ ಉದ್ದೇಶವನ್ನಿಡೇರಿಸಿಕೊಳ್ಳಲು ಸದರಿ ಕಂಪನಿಗೆ ಸೇರಿದ ರೂ.5 ಲಕ್ಷ ಬೆಲೆ ಬಾಳುವ Computers & CPU & Electronics Accessories ಗಳನ್ನು ಕಂಪನಿಯ ಅನುಮತಿಯಿಲ್ಲದೆ ಕಂಪನಿಯಿಂದ ಹೊರಗಡೆ ಸಾಗಿಸಿ ಬೇರೆಯವರಿಗೆ ಮಾರಾಟ ಮಾಡಿ ಬಂದ ಹಣವನ್ನು ಕಂಪನಿಗೆ ಸಂದಾಯ ಮಾಡದೇ ಸ್ವಂತಕ್ಕೆ ದುರ್ಬಳಕೆ ಮಾಡಿಕೊಂಡು ಸದರಿ ಕಂಪನಿಗೆ ಮೋಸ ಮಾಡಿ ಹಣವನ್ನು ಸಂದಾಯ ಮಾಡದೇ ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 34 ರ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರಃ1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉಃ 1 ನೇ ಆರೋಪಿಃ

2 ನೇ ಆರೋಪಿಃ

ಪ್ರಃ2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉಃ 1 ನೇ ಆರೋಪಿಃ

2 ನೇ ಆರೋಪಿಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕಃ26.10.2023.

3 ನೇ ಎ.ಸಿ.ಎಂ.ಎಂ., ನ್ಯಾಯಾಲಯ,
ಬೆಂಗಳೂರು.